

بسم اللهِ الرّحمٰن الرّحيم

# ಮಸೀಹ್ ಮೌಊದ್ ದಿನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **26–03–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

هُوَ الَّذِيْ بَعَثَ فِي الْأُمِّيّٖنَ رَسُوْلًا مِّنْهُمْ يَتْلُوْا عَلَيْهِمْ اٰيٰتِهٖ وَيُزَكِّيْهِمْ وَيُعَلِّمُهُمُ الْكِتٰبَ وَالْحِكْمَةَ ۗ وَإِنْ كَانُوْا مِنْ قَبْلُ لَفِيْ ضَلٰلٍ مُّبِيْنٍ

ಅರ್ಥ: ಓದು ಬರಹ ಅರಿಯದ ಜನರಲ್ಲಿ, ಅವರಿಂದಲೇ ಒಬ್ಬ ಸಂದೇಶವಾಹಕನನ್ನು ನಿಯುಕ್ತಿಗೊಳಿಸಿದವನು ಅವನೇ, ಆ ಸಂದೇಶವಾಹಕ ಅಲ್ಲಾಹನ ವಚನಗಳನ್ನು ಅವರಿಗೆ ವಾಚಿಸುತ್ತಾರೆ; ಅವರನ್ನು ಶುದ್ಧೀಕರಿಸುತ್ತಾರೆ ಹಾಗೂ ಅವರಿಗೆ ಗ್ರಂಥವನ್ನೂ ಜ್ಞಾನವನ್ನೂ ಕಲಿಸುತ್ತಾರೆ. ಮುಂಚೆಯಾದರೋ ಆ ಜನರು ಸ್ಪಷ್ಟವಾದ ತಪ್ಪು ಹಾದಿಯಲ್ಲಿದ್ದರು. (62:3).

ಅಹ್ಮದಿಯಾ ಜಮಾಅತ್ ಸ್ಥಾಪನೆಯಾದ ದಿನವಾದ ಮಾರ್ಚ್ 23 ಕೆಲವು ದಿನಗಳ ಹಿಂದೆ ದಾಟಿಹೋಯಿತು. ಹಝ್ರತ್ ಮಸೀಹ್ ಮೌಊದ್(ಅ)ರ ಆಗಮನದ ಉದ್ದೇಶ ಪವಿತ್ರ ಖುರ್‌ಆನಿನ ಮತ್ತು ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಗಳ ಪ್ರಕಾರ ಧರ್ಮದ ಪುನರುದ್ಧಾರ ಮಾಡುವುದು ಹಾಗೂ ಇಸ್ಲಾಮಿನ ನೈಜ ಶಿಕ್ಷಣವನ್ನು ಲೋಕದಲ್ಲಿ ಜಾರಿಗೊಳಿಸುವುದಾಗಿದೆ ಎಂದು ಈ ದಿನ ಪ್ರತಿ ವರ್ಷ ನಮ್ಮನ್ನು ನೆನಪಿಸುವಂತಾಗಿರಬೇಕು. ಬೈಅತ್ ಮಾಡಿದ್ದೇವೆ ಎಂದು ವಾದಿಸುವ ನಾವು ಸಹ ಈ ಮುಖ್ಯವಾದ ಕೆಲಸವನ್ನು ಈಡೇರಿಸಲು ನಮ್ಮ ಸಾಮರ್ಥ್ಯಗಳ ಪ್ರಕಾರ ಭಾಗಿಯಾಗಬೇಕು, ದಾರಿಗೆಟ್ಟ ಮನುಷ್ಯರ ಸಂಬಂಧ ಅಲ್ಲಾಹನೊಂದಿಗೆ ಜೋಡಿಸಬೇಕು ಹಾಗೂ ಅನ್ಯೋನ್ಯ ಹಕ್ಕುಗಳನ್ನು ಈಡೇರಿಸುವ ಕಡೆಗೆ ಜನರ ಗಮನವನ್ನು ಸೆಳೆಯಬೇಕು. ಇದಕ್ಕಾಗಿ ನಾವು ಸ್ವತಃ ನಮ್ಮ ಸುಧಾರಣೆ ಮಾಡಬೇಕಾದುದು ಅನಿವಾರ್ಯವಾಗಿದೆ.

ಈಗ ನಾನು ಹಝ್ರತ್ ಮಸೀಹ್ ಮೌಊದ್(ಅ)ರ ಕೆಲವು ಉಲ್ಲೇಖಗಳನ್ನು ನಿಮ್ಮ ಮುಂದಿರಿಸುತ್ತೇನೆ. ಅವುಗಳಲ್ಲಿ ಅವರ ಆಗಮನದ ಆವಶ್ಯಕತೆ, ಉದ್ದೇಶ ಹಾಗೂ ಹಿಂದಿನ ಭವಿಷ್ಯವಾಣಿಗಳ ಪ್ರಸ್ತಾಪವಿದೆ. ಅವುಗಳಿಂದ ಹಝ್ರತ್ ಮಸೀಹ್ ಮೌಊದ್(ಅ)ರ ಸತ್ಯತೆಯ ಸಬೂತು ಸಿಗುತ್ತದೆ ಹಾಗೂ ಸಹಾಬರಲ್ಲಿ ಉಂಟಾದಂತಹ ಪರಿಶುದ್ಧ ಬದಲಾವಣೆಗಳು ಜಮಾಅತಿನಲ್ಲಿ ಉಂಟಾಗುವುವು ಮತ್ತು ಸಹಾಬರು ದಾಟಿದಂತಹ ಕಷ್ಟತೆಗಳಿಂದ ನಾವು ಸಹ ದಾಟಲಿರುವೆವು ಎಂಬುದರ ಪ್ರಸ್ತಾಪ ಸಿಗುತ್ತದೆ. ಒಟ್ಟಿನಲ್ಲಿ ಒಂದು ಜಮಾಅತ್ ಎಂಬ ನೆಲೆಯಲ್ಲಿ ಪ್ರಗತಿ ಹೊಂದುತ್ತಿರಲು ನಾವು ಸದಾ ಈ ಸಂಗತಿಗಳನ್ನು ಮುಂದಿರಿಸಬೇಕು.

ನಾನು ಪಠಿಸಿದ ಆಯತ್‌ಗಳನ್ನು ವಿವರಿಸುತ್ತಾ ಒಂದೆಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ಹೇಳುತ್ತಾರೆ: ಈ ಆಯತ್ತಿನ ತಾತ್ಪರ್ಯವೇನೆಂದರೆ, ಜನರಿಗೆ ಅರಿವು ಮತ್ತು ವಿವೇಕವಿಲ್ಲವಾದಾಗ ಅಲ್ಲಾಹನು ಪ್ರವಾದಿಯನ್ನು ಕಳುಹಿಸಿದನು. ಆ ಪ್ರವಾದಿ ಜನರ ಆತ್ಮಗಳನ್ನು ಪರಿಶುದ್ಧಗೊಳಿಸಿದರು ಮತ್ತು ಪವಿತ್ರ ಖುರ್‌ಆನಿನ ಅರಿವು ಮತ್ತು ತತ್ವಜ್ಞಾನದಿಂದ ಅವರನ್ನು ಪರಿಪೂರ್ಣ ದೃಢವಿಶ್ವಾಸದ ಮಟ್ಟಕ್ಕೆ ತಲುಪಿಸಿದರು. ಮತ್ತೆ ಹೇಳುತ್ತಾರೆ: ಕೊನೆಯ ಕಾಲದಲ್ಲಿ ಆಗಮಿಸಲಿರುವ ಬೇರೊಂದು ಪಂಗಡ ಸಹ ಇದೆ. ಅದು ಸಹ ಆರಂಭ ಕಾಲದ ಅಂಧಕಾರ ಮತ್ತು ದುರ್ಮಾರ್ಗದಲ್ಲಿ ಇರುವುದು. ಅರಿವು, ಯುಕ್ತಿ ಮತ್ತು ದೃಢವಿಶ್ವಾಸದಿಂದ ದೂರವಾಗಿರುವುದು. ಆಗ ಅಲ್ಲಾಹನು ಅವರನ್ನು ಸಹ ಸಹಾಬರ ಹಾಗೆ ಮಾಡುವನು. ಎಲ್ಲಿಯ ವರೆಗೆ ಎಂದರೆ, ಅವರ ಸತ್ಯಸಂಧತೆ ಮತ್ತು ದೃಢವಿಶ್ವಾಸ ಸಹಾಬರ ಸತ್ಯಸಂಧತೆ ಮತ್ತು ದೃಢವಿಶ್ವಾಸದಂತೆ ಆಗುವುದು.

ಒಟ್ಟಿನಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರನ್ನು ಬೈಅತ್ ಮಾಡಿಕೊಂಡು ಅವರ ಸತ್ಯತೆಯ ಬಗ್ಗೆ ನಮಗೆ ಇರಬೇಕಾದ ದೃಢವಿಶ್ವಾಸದ ಸ್ಥಿತಿ ಸಹಾಬರಿಗೆ ಹಝ್ರತ್ ಪೈಗಂಬರ್(ಸ)ರ ಮೇಲೆ ಮತ್ತು ಇಸ್ಲಾಮಿನ ಸತ್ಯತೆಯ ಮೇಲೆ ಇದ್ದಂಥದ್ದಾಗಿರಬೇಕು. ಸಹಾಬರ ಸ್ಥಿತಿಗತಿಗಳ ಬಗ್ಗೆ ಈಗ ನಾನು ಖುತ್ಬಗಳನ್ನು ಸಹ ನೀಡುತಿದ್ದೇನೆ. ಉದಾಹರಣೆಗಳು ನಮ್ಮ ಮುಂದಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ಹೇಳುತ್ತಾರೆ: ಈ ಆಯತ್ತನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಪೈಗಂಬರ್(ಸ) ಸಲ್ಮಾನ್ ಫಾರಸಿಯ ಭುಜದ ಮೇಲೆ ಕೈಯಿಟ್ಟುಕೊಂಡು ಹೀಗೆ ಹೇಳಿದ್ದಾಗಿ ಸಹೀಹಾದ ಹದೀಸಿನಲ್ಲಿ ಇದೆ. ಹಝ್ರತ್ ಪೈಗಂಬರ್(ಸ) ಹೇಳಿದ್ದರು: ವಿಶ್ವಾಸವು ಕೃತಿಕಾ ನಕ್ಷತ್ರಕ್ಕೆ ಹೋದರು ಕೂಡ ಫಾರಸಿ ವಂಶದ ಒಬ್ಬ ವ್ಯಕ್ತಿ ಅದನ್ನು ಮರಳಿ ತರುವರು. ಕೊನೆಗಾಲದಲ್ಲಿ ಪವಿತ್ರ ಖುರ್‌ಆನ್ ಆಕಾಶಕ್ಕೆ ಎತ್ತಲ್ಪಡುವುದು ಎಂದು ಯಾವ ಕಾಲದ ಬಗ್ಗೆ ಬರೆಯಲಾಗಿದೆಯೋ ಅದು ಮಸೀಹ್ ಮೌಊದ್‌ರ ಕಾಲವೇ ಆಗಿದೆ. ಹಲವಾರು ಬುದ್ಧಿಹೀನರು ಏಕದೇವನನ್ನು ಬಿಟ್ಟುಬಿಡುವರು ಮತ್ತು ಸತ್ಯವಿಶ್ವಾಸದ ಮೇಲಿನ ಪ್ರೀತಿ ಬಹುತೇಕ ಜನರಿಗೆ ಕಡಿಮೆಯಾಗುವುದು ಎಂದು ಯಾವ ಕಾಲದ ಕ್ರಿಸ್ತೀಯ ಆಕ್ರಮಣ ಅಥವಾ ದಜ್ಜಾಲಿನ ಆಕ್ರಮಣದ ಬಗ್ಗೆ ಹಿಂದಿನ ಗ್ರಂಥಗಳಲ್ಲಿ ಬರೆಯಲಾಗಿದೆಯೋ ಆ ಸಮಯದಲ್ಲಿ ಮಸೀಹ್ ಮೌಊದ್‌ರ ಆಗಮನ ಉಂಟಾಗುವುದು. ಅವರ ಅತಿ ಪ್ರಧಾನವಾದ ಕೆಲಸ ವಿಶ್ವಾಸವನ್ನು ಪುನರುದ್ಧಾರ ಮಾಡುವುದಾಗಿರುವುದು. ಅವರ ಜಮಾಅತಿನ ಬಗ್ಗೆಯೇ **ವ**

**ಆಖರೀನ ಮಿನ್‌ಹುಂ ಲಮ್ಮಾ ಯಲ್‌ಹಖೂ ಬಿಹಿಂ** ಎಂಬ ವಚನದಲ್ಲಿ ಹೇಳಲಾಗಿದೆ. ಎಂದರೆ, ಅವರೊಂದಿಗೆ ಇಷ್ಟರ ವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ ಎಂದು ಪ್ರಸ್ತಾಪಿಸಲಾಗಿದೆ.

ಈ ಆಯತ್ತಿನ ಅರ್ಥವೇನೆಂದರೆ, ಸಂಪೂರ್ಣವಾದ ದುರ್ಮಾರ್ಗದ ನಂತರ ಸನ್ಮಾರ್ಗ ಮತ್ತು ವಿವೇಕವನ್ನು ಗಳಿಸುವ ಪಂಗಡಗಳು ಎರಡೇ ಆಗಿರುವುವು. ಒಂದು ಹಝ್ರತ್ ಪೈಗಂಬರ್[ಸ]ರ ಸಹಾಬರ ಸಂಘ ಮತ್ತೊಂದು ಮಸೀಹ್ ಮೌಊದ್[ಅ]ರ ಸಂಘ. ಏಕೆಂದರೆ, ಈ ಸಂಘವು ಸಹಾಬರ ಹಾಗೆಯೇ ಹಝ್ರತ್ ಪೈಗಂಬರ್[ಸ]ರ ದೃಷ್ಟಾಂತಗಳನ್ನು ನೋಡುವ ಸಂಘವಾಗಿದೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಇಂದು ಹದಿಮೂರು ಶತಮಾನಗಳ ನಂತರ ಹಝ್ರತ್ ಪೈಗಂಬರ್[ಸ]ರ ದೃಷ್ಟಾಂತಗಳ ಬಾಗಿಲು ತೆರೆದಿದೆ. ಜನರು ತಮ್ಮ ಕಣ್ಣುಗಳಿಂದ ರಮಝಾನ್ ತಿಂಗಳಲ್ಲಿ ಸೂರ್ಯ – ಚಂದ್ರ ಗ್ರಹಣಗಳನ್ನು ನೋಡಿದರು. ಝುಸ್ಸಿನೀನ್ ನಕ್ಷತ್ರವನ್ನು ಸಹ ಸಾವಿರಾರು ಜನರು ನೋಡಿದರು. ಅದೇ ರೀತಿಯಲ್ಲಿ ಜಾವದ ಬೆಂಕಿ, ಪ್ಲೇಗ್ ರೋಗದ ಹರಡುವಿಕೆ, ಹಜ್ಜ್ ಕರ್ಮಾನುಷ್ಠಾನದಿಂದ ತಡೆಯಲ್ಪಡುವುದು, ದೇಶದಲ್ಲಿ ರೈಲು ನಿರ್ಮಾಣವಾಗುವುದು, ಒಂಟೆಗಳು ಉಪಯೋಗಶೂನ್ಯವಾಗುವುದು, ಇವೆಲ್ಲವೂ ಹಝ್ರತ್ ಪೈಗಂಬರ್[ಸ]ರ ದೃಷ್ಟಾಂತಗಳಾಗಿದ್ದುವು. ಅವೆಲ್ಲವೂ ಅದೇ ರೀತಿಯಲ್ಲಿ ಈಡೇರಿದುವು. ನಮ್ಮ ಜಮಾಅತಿಗೆ ಸಹಾಬರೊಂದಿಗೆ ಹೋಲಿಕೆಯಿದೆ. ಸಹಾಬರು ನೋಡಿದ ರೀತಿಯಲ್ಲಿ ಅವರು ದೃಷ್ಟಾಂತಗಳನ್ನು ಕಾಣುತ್ತಾರೆ. ಅಲ್ಲಾಹನ ಮಾರ್ಗದಲ್ಲಿ ಜನರ ಅಪಹಾಸ್ಯ, ಪರಿಹಾಸ, ಶಾಪ ಹಾಕುವಿಕೆ ಮತ್ತು ಹಲವು ರೀತಿಯ ನೋವು ಉಂಟುಮಾಡುವ ಮಾತುಗಳು ಮತ್ತು ಅಸಭ್ಯ ಮಾತುಗಳು ಮುಂತಾದ ದುಃಖವನ್ನು ಸಹಾಬರಂತೆ ಸಹಿಸುತ್ತಿದ್ದಾರೆ. ಅವರಲ್ಲಿ ಹಲವಾರು ವ್ಯಕ್ತಿಗಳು ನಮಾಝ್‌ನಲ್ಲಿ ಅಳುತ್ತಾರೆ, ಸಾಷ್ಟಾಂಗ ಮಾಡುವ ಜಾಗಗಳನ್ನು ಕಣ್ಣೀರಿನಿಂದ ಒದ್ದೆಮಾಡುತ್ತಾರೆ, ದಿವ್ಯವಾಣಿಗಳನ್ನು ಪಡೆಯುತ್ತಾರೆ ಮತ್ತು ಸ್ವಂತ ಪರಿಶ್ರಮದಿಂದ ಗಳಿಸಿದ ಸಂಪತ್ತನ್ನು ಅಲ್ಲಾಹನ ಸಂಪ್ರೀತಿಗಾಗಿ ಸಹಾಬರ ಹಾಗೆ ಖರ್ಚು ಮಾಡುತ್ತಾರೆ. ಒಟ್ಟಿನಲ್ಲಿ, **ಆಖರೀನ ಮಿನ್‌ಹುಂ** ಎಂಬ ವಚನದಲ್ಲಿ ಉದ್ದೇಶಿಸಲಾದ ಎಲ್ಲ ಲಕ್ಷಣಗಳು ಈ ಜಮಾಅತಿನಲ್ಲಿ ಕಂಡುಬರುತ್ತವೆ. ಈ ಕಾಲದಲ್ಲಿ ವಿವಿಧ ಪಂಗಡಗಳನ್ನು ಒಂದು ಸಮುದಾಯವನ್ನಾಗಿ ಮಾಡಲು ಮತ್ತು ಧಾರ್ಮಿಕ ಜಗಳಗಳನ್ನು ಕೊನೆಗೊಳಿಸಿ ಎಲ್ಲರನ್ನು ಒಂದೇ ಧರ್ಮದಲ್ಲಿ ಒಟ್ಟುಸೇರಿಸಲು ಅಲ್ಲಾಹನು ಉದ್ದೇಶಿಸಿದ್ದಾನೆ. ಈ ಕೊನೆಯ ಕಾಲಘಟ್ಟದ ಅನೇಕ ಕುರುಹುಗಳ ಕುರಿತು ಪವಿತ್ರ ಖುರ್‌ಆನಿನಲ್ಲಿ ಬರೆಯಲಾಗಿದೆ. ಉದಾಹರಣೆಗೆ, ನಾಳೆಗಳ ನಿರ್ಮಾಣ, ಭೂಗರ್ಭ ಜ್ಞಾನ ಮತ್ತು ಖನಿಜಗಳು ಬಯಲಾಗುವುದು, ಒಂಟೆಗಳು ಉಪಯೋಗವಿಲ್ಲದಂತೆ ಆಗುವುದು, ಪುಸ್ತಕಗಳು ಬಹಳ ಹೆಚ್ಚಾಗಿ ಪ್ರಕಾಶನಗೊಳ್ಳುವುದು, ಪರಸ್ಪರ ಭೇಟಿ ಸುಲಭವಾಗುವುದು, ಚಂದ್ರ – ಸೂರ್ಯ ಗ್ರಹಣ, ಪ್ಲೇಗ್ ರೋಗದ ಹರಡುವಿಕೆ ಇತ್ಯಾದಿ. ಪವಿತ್ರ ಖುರ್‌ಆನಿನಲ್ಲಿ ಬರೆಯಲಾದ ಎಲ್ಲ ಲಕ್ಷಣಗಳು ಪ್ರಕಟವಾದ ಕಾಲದಲ್ಲಿ ನನ್ನ ಆಗಮನವಾದದ್ದು ಬುದ್ಧಿವಂತರಿಗೆ ಆಲೋಚಿಸಲು ಸ್ಪಷ್ಟವಾದ ಪುರಾವೆಗಳಾಗಿವೆ.

ಹಝ್ರತ್ ಮಸೀಹ್ ಮೌಊದ್[ಅ] ತನ್ನ ವಾದದ ಕುರಿತು ಹೇಳುತ್ತಾರೆ: ನಾನು ಸರಿಯಾದ ಸಮಯದಲ್ಲಿ ಆಗಮಿಸಿದ ವ್ಯಕ್ತಿಯಾಗಿರುವೆನು. ದೃಷ್ಟಾಂತಗಳನ್ನು ತೋರಿಸುವುದರಲ್ಲಿ ನನ್ನನ್ನು ಎದುರಿಸಿ ಜಯಿಸಬಲ್ಲ ಯಾವನಾದರೂ ವ್ಯಕ್ತಿ ಭೂಮಿಯಲ್ಲಿದ್ದಾನೆಯೇ? ಯಾರ ಕೈಯಲ್ಲಿ ನನ್ನ ಜೀವವಿದೆಯೋ ಅವನ ಆಣೆಹಾಕಿಕೊಂಡು ನಾನು ಹೇಳುತ್ತೇನೆ: ಇಲ್ಲಿಯ ವರೆಗೆ ಎರಡು ಲಕ್ಷಗಳಿಗಿಂತ ಅಧಿಕ ದೈವಿಕ ಕುರುಹುಗಳು ನನ್ನ ಕೈಗಳಿಂದ ಪ್ರಕಟವಾಗಿವೆ. ಹಝ್ರತ್ ಪೈಗಂಬರ್[ಸ] ಬಂದು ನನ್ನ ಸತ್ಯತೆಯನ್ನು ರುಜುವಾತು ಮಾಡಿದ್ದಾಗಿ ಹತ್ತು ಸಾವಿರದಷ್ಟು ಜನರು ಕನಸಿನಲ್ಲಿ ಕಂಡರು. ಸತ್ಯವೇನೆಂದರೆ, ಜಗಳಗಳನ್ನು ಕೊನೆಗೊಳಿಸುವುದು ಮತ್ತು ಲೇಖನಿ, ದುಆ ಹಾಗೂ ವಿಶೇಷವಾದ ಕಾಳಜಿಯಿಂದ ಇಸ್ಲಾಮಿಗೆ ಮೇಲುಗೈ ಉಂಟಾಗುವಂತೆ ಮಾಡುವುದೇ ಮಸೀಹ್ ಮೌಊದ್‌ರ ಕೆಲಸವಾಗಿದೆ. ಜನರಿಗೆ ಈ ಸಂಗತಿ ಮನವರಿಕೆಯಾಗುವುದಿಲ್ಲ. ಭೌತಿಕತೆಯ ಕಡೆಗೆ ಇರುವಂತಹ ಗಮನ ಧರ್ಮದ ಕಡೆಗೆ ಇಲ್ಲವೆಂಬುದು ದುಃಖಕರವಾಗಿದೆ. ಲೋಕದ ಮಾಲಿನ್ಯ ಮತ್ತು ಕೊಳಕಿನಲ್ಲಿ ಮುಳುಗಿಕೊಂಡು ಪವಿತ್ರ ಖುರ್‌ಆನಿನ ಪರಿಜ್ಞಾನವನ್ನು ಪಡೆಯಬಹುದು ಎಂದು ಹೇಗೆ ಪ್ರತೀಕ್ಷೆ ಇರಿಸಲು ಸಾಧ್ಯ? ಇಸ್ಲಾಮಿನ ಪುನರುದ್ಧಾರ ಮತ್ತು ಸಹಾಯ ಮಾಡುವುದೇ ನನ್ನ ಆಗಮನದ ಉದ್ದೇಶವಾಗಿದೆ. ಹಝ್ರತ್ ಪೈಗಂಬರ್[ಸ]ರ ಆಗಮನದೊಂದಿಗೆ ಶರೀಅತ್ ಮತ್ತು ಪ್ರವಾದಿತ್ವ ಕೊನೆಗೊಂಡಿದೆ. ಆದರೆ ಹಝ್ರತ್ ಪೈಗಂಬರ್[ಸ]ರ ಅನುಗ್ರಹಗಳು, ವರದಾನಗಳು, ಪವಿತ್ರ ಖುರ್‌ಆನಿನ ಶಿಕ್ಷಣ ಮತ್ತು ನಿರ್ದೇಶನದ ಫಲಗಳು ಕೊನೆಗೊಂಡಿಲ್ಲ. ಇಸ್ಲಾಮಿನ ನೆರವು ಮತ್ತು ಮುಸ್ಲಿಮರ ನೇತೃತ್ವವನ್ನು ವಹಿಸಲು ಮುಸ್ಲಿಮರ ಅವನತಿ ಮತ್ತು ದೌರ್ಬಲ್ಯದ ಕಾಲಘಟ್ಟದಲ್ಲಿ ಅಲ್ಲಾಹನು ನನ್ನನ್ನು ಕಳುಹಿಸಿದ್ದಾನೆ.

ವಿರೋಧಿಗಳ ಕೊಳಕು ಮಾತಿನ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ಹೇಳುತ್ತಾರೆ: ನನ್ನನ್ನು ದಜ್ಜಾಲ್ ಮತ್ತು ಕಝ್ಝಾಬ್ ಎಂದು ಕರೆಯುವುದರಿಂದ ಮತ್ತು ನನ್ನ ಮೇಲೆ ದೋಷಾರೋಪಗಳನ್ನು ಹೊರಿಸುವುದರಿಂದ ನನಗೆ ದುಃಖವಿಲ್ಲ. ಹಿಂದಿನ ಪ್ರವಾದಿಗಳೊಂದಿಗೆ ವರ್ತಿಸಿದ ರೀತಿ ನನ್ನೊಂದಿಗೆ ಕೂಡ ಖಂಡಿತ ಆಗಲೇ ಬೇಕಿತ್ತು. ನಮ್ಮ ನೇತಾರ ಮತ್ತು ಸರದಾರರಾದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹಾದಿಯಲ್ಲಿ ಬಂದಿದ್ದ ವಿಪತ್ತುಗಳು ಮತ್ತು ಕಷ್ಟತೆಗಳ ಒಂದಂಶ ಕೂಡ ನನಗೆ ಬಂದಿಲ್ಲ.

ಇಸ್ಲಾಮನ್ನು ಜಯಗೊಳಿಸುವ ಮತ್ತು ಇತರ ಧರ್ಮಗಳ ಮೇಲೆ ಮೇಲುಗೈ ಸಾಧಿಸುವಂತಹ ಮಾರ್ಗವನ್ನು ನಾನು ಸಮಗ್ರವಾಗಿ ಮುಂದಿರಿಸಿದ್ದೇನೆ. ನಾನು ಅಲ್ಲಾಹನ ಹೆಸರಲ್ಲಿ ಆಣೆಯಿಟ್ಟು ಹೇಳಿದ ನಂತರ ಮತ್ತು ನನ್ನ ಪರವಾಗಿ ಪ್ರಕಟವಾದ ದೃಷ್ಟಾಂತಗಳನ್ನು ನೋಡಿದ ನಂತರ ಕೂಡ ನನ್ನನ್ನು ಸುಳ್ಳುವಾದಿ

ಮತ್ತು ಅಲ್ಲಾಹನ ಮೇಲೆ ಸುಳ್ಳು ಸೃಷ್ಟಿಸುವವನು ಎಂದು ನೀವು ಹೇಳುತ್ತಿರುವಿರಾದರೆ, ನಾನು ಅಲ್ಲಾಹನ ಹೆಸರಲ್ಲಿ ಆಣೆಹಾಕಿಕೊಂಡು ಕೇಳುತ್ತೇನೆ, ಅಲ್ಲಾಹನ ಸಹಾಯ ಮತ್ತು ನೆರವು ಸದಾ ಲಭಿಸುತ್ತಿರುವ ಒಬ್ಬ ಸುಳ್ಳುವಾದಿಯ ಉದಾಹರಣೆಯನ್ನು ನನಗೆ ತೋರಿಸಿ ಕೊಡಿರಿ. ನಾನು ಸತ್ಯವಂತನಾಗಿದ್ದೇನೆ ಎಂದು ನಾನು ಅಲ್ಲಾಹನ ಆಣೆಹಾಕಿಕೊಂಡು ಹೇಳುತ್ತೇನೆ. ಅಲ್ಲಾಹನು ಪ್ರತಿಯೊಂದು ವ್ಯವಹಾರ ಮತ್ತು ವಿಪತ್ತಿನಲ್ಲಿ ನನಗೆ ನೆರವು ನೀಡುತ್ತಾನೆ ಮತ್ತು ಲಕ್ಷಾಂತರ ಜನರ ಹೃದಯಗಳಲ್ಲಿ ನನ್ನ ಮೇಲಿನ ಪ್ರೀತಿಯನ್ನು ಅಲ್ಲಾಹನು ಉಂಟುಮಾಡಿದ್ದಾನೆ. ಆದುದರಿಂದ ಆಕಾಶದಿಂದ ವರ್ಷಿಸುತ್ತಿರುವ ಪ್ರಕಾಶಗಳು ಮತ್ತು ಅನುಗ್ರಹಗಳಿಗೆ ಮುಸ್ಲಿಮರು ಬೆಲೆಕೊಡಬೇಕು. ಸಮಯಕ್ಕೆ ಸರಿಯಾಗಿ ಅವರಿಗೆ ನೆರವು ಲಭಿಸಿರುವ ಕಾರಣ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಇತರ ಧರ್ಮಗಳನ್ನು ಅಳಿಸಲು ಮತ್ತು ಇಸ್ಲಾಮಿಗೆ ವಿಜಯ ಮತ್ತು ಶಕ್ತಿ ನೀಡಲು ಅಲ್ಲಾಹನು ನಿರ್ಧಾರ ಮಾಡಿದ್ದಾನೆ ಎಂದು ನಾನು ಬಹಳ ಶಕ್ತವಾಗಿ, ಪರಿಪೂರ್ಣ ದೃಢವಿಶ್ವಾಸ ಮತ್ತು ಅಂತರ್ದೃಷ್ಟಿಯಿಂದ ಹೇಳುತ್ತಿದ್ದೇನೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನಾನು ಹಝ್ರತ್ ಪೈಗಂಬರ್[ಸ]ರ ಸಮುದಾಯದವನಾಗಿರದಿರುತ್ತಿದ್ದರೆ ಮತ್ತು ಹಝ್ರತ್ ಪೈಗಂಬರ್[ಸ]ರನ್ನು ಅನುಸರಿಸದೇ ಇರುತ್ತಿದ್ದರೆ, ಲೋಕದ ಎಲ್ಲ ಪರ್ವತಗಳಿಗೆ ಸಮವಾಗಿ ನನ್ನ ಸತ್ಕರ್ಮಗಳು ಇರುತ್ತಿದ್ದರೂ ಎಂದಿಗೂ ಅಲ್ಲಾಹನೊಂದಿಗೆ ಮಾತುಕತೆ ಮತ್ತು ಸಂಭಾಷಣೆ ನಡೆಸುವ ಸೌಭಾಗ್ಯವನ್ನು ನಾನು ಪಡೆಯುತ್ತಿರಲಿಲ್ಲ. ಏಕೆಂದರೆ ಮುಹಮ್ಮದೀ ಪ್ರವಾದಿತ್ವದ ಹೊರತುಪಡಿಸಿ ಬಾಕಿಯೆಲ್ಲ ಪ್ರವಾದಿತ್ವಗಳು ಮುಚ್ಚಲ್ಪಟ್ಟಿವೆ. ಅಲ್ಲಾಹನು ನನ್ನನ್ನು ಯಾವ ಕೆಲಸಕ್ಕಾಗಿ ಕಳುಹಿಸಿರುವನೋ ಅದೇನೆಂದರೆ, ಅಲ್ಲಾಹನ ಮತ್ತು ಸೃಷ್ಟಿಗಳ ಸಂಬಂಧದಲ್ಲಿ ಉಂಟಾದ ಬಿರುಕನ್ನು ಹೋಗಲಾಡಿಸಿ ಪ್ರೀತಿ ಮತ್ತು ನಿಷ್ಠೆಯ ಸಂಬಂಧವನ್ನು ಪುನಃ ಸ್ಥಾಪಿಸುವುದಾಗಿದೆ.

(ಹುಝೂರ್ ಹೇಳಿದರು:) ಲೋಕದಲ್ಲಿ ನೆಲೆಸಿರುವ ಜನರು, ವಿಶೇಷವಾಗಿ ಮುಸ್ಲಿಮರು ಈ ಸತ್ಯವನ್ನು ಮತ್ತು ಹಝ್ರತ್ ಮಸೀಹ್ ಮೌಊದ್[ಅ]ರ ವಾದವನ್ನು ಮನವರಿಕೆ ಮಾಡುವಂತೆ ಅಲ್ಲಾಹನು ಮಾಡಲಿ ಮತ್ತು ಬೇಗನೇ ಮಸೀಹ್ ಮತ್ತು ಮಹ್‌ದಿಯ ಬೈಅತ್ ಮಾಡುವವರಾಗಲಿ.

(ಖುತ್ಬದ ಕೊನೆಯಲ್ಲಿ ಹುಝೂರ್ ಪಾಕಿಸ್ತಾನ ಮತ್ತು ಅಲ್‌ಜೀರಿಯದ ಅಹ್ಮದಿಯರಿಗಾಗಿ ದುಆ ಮಾಡಲು ಮನವಿ ಮಾಡುತ್ತಾ ಹೀಗೆ ಹೇಳಿದರು:) ಪಾಕಿಸ್ತಾನದಲ್ಲಿ ಪ್ರತಿದಿನ ಏನಾದರೊಂದು ಘಟನೆ ನಡೆಯುತ್ತಾ ಇರುತ್ತದೆ. ಅದೇ ರೀತಿಯಲ್ಲಿ ಅಲ್‌ಜೀರಿಯದಲ್ಲೂ ಅಲ್ಲಿಯ ಸರ್ಕಾರದ ಕೆಲವು ಅಧಿಕಾರಿಗಳ ಉದ್ದೇಶಗಳು ಸರಿಯಲ್ಲವೆಂದು ತೋರುತ್ತದೆ. ಅಲ್ಲಾಹನು ಲೋಕದ ಪ್ರತಿ ದೇಶದಲ್ಲಿ ಪ್ರತಿಯೊಬ್ಬ ಅಹ್ಮದಿಯನ್ನು ತನ್ನ ಸಂರಕ್ಷಣೆಯಲ್ಲಿ ಇರಿಸಲಿ. ಅಹ್ಮದಿಯರು ಸಹ ಹಿಂದಿಗಿಂತ ಹೆಚ್ಚಾಗಿ ಅಲ್ಲಾಹನ ಕಡೆಗೆ ಬಾಗಲು ಗಮನಹರಿಸಬೇಕು. ಜನರ ಹಕ್ಕುಗಳನ್ನು ಈಡೇರಿಸುವವರಾಗಬೇಕು. ಅಲ್ಲಾಹನು ನಮಗೆಲ್ಲರಿಗೂ ಅದರ ಸೌಭಾಗ್ಯ ನೀಡಲಿ – ಆಮೀನ್.

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّاٰتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَاْمُرُ بِالْعَدْلِ وَالْاِحْسَانِ وَاِیْتَآءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ○ اُذْکُرُوااللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 26-03-2021*

**Summarized by** *Majlis Ansarullah Bharat*

***Kannada Translation***: Moulavi Inamullah for Kannada Desk, Qadian

***Reviewed by***: M.P Ibrahim |***Layout***: U Basheer Ahmad

***Published By***: Kannada Isha'at Team for Nazarath Nashr-O-Isha'ath, Qadian

**Email**: *khutuba.kannada@gmail.com*

**You can find all the Sermons archived at**: www.alislam.org/friday-sermon